"ಇದೊಂದು ಹೊಸ ಆಯಾಮ. ನಾನು ಬೇರೆಯದೇ ದಿಕ್ಕಿನಲ್ಲಿ ಯೋಚಿಸುತ್ತಿದ್ದೆ. ನೀನೇನಾದರೂ ಊಹನೆ ಮಾಡಿದ್ದೀಯಾ?"

"ನನಗನ್ನಿಸುತ್ತೆ ಇದರಲ್ಲಿ ಇಬ್ಬರು ವ್ಯಕ್ತಿಗಳು ಷಾಮೀಲಾಗಿದ್ದಾರೆ. ಒಂದು ವ್ಯಕ್ತಿ ಕಳವು ಮಾಡುತ್ತದೆ. ಇನ್ನೊಂದು ವ್ಯಕ್ತಿ ಅದನ್ನು ಬಚ್ಚಿಡುತ್ತದೆ." ನಾನು ತರ್ಕ ಮಂಡಿಸಿದೆ.

"ನೀನು ಹೇಳ್ತಿರೋದೇನು?"

"ಪುಷ್ಪಾ ಕಳವು ಮಾಡುತ್ತಾಳೆ. ಅಜಿತ್ ಅದಕ್ಕೆ ನೆರವು ನೀಡ್ತಾನೆ. ಅಥವಾ ಉಲ್ಟಾಪಲ್ಟಾ!"

"ಅಂದರೆ?"

"ಕಳವು ಆದ ತಕ್ಷಣ ಹಣ ಎಲ್ಲಿರುತ್ತೆ ಗೊತ್ತೆ? ಬೋಪಣ್ಣನ ಮಲಗುವ ಕೋಣೆಯಲ್ಲಿ. ಆತ ಅಲ್ಲಿ ಹುಡುಕಾಟ ನಡೆಸುವುದೇ ಇಲ್ಲ! ಪ್ರಾಯಶಃ ನಿನ್ನೆ ರಾತ್ರಿ ಆ ಪರ್ಸು ಆತನ ಕೋಣೆಯಲ್ಲೇ ಇತ್ತು. ಅದನ್ನು ಹುಗಿದಿರಬಹುದೇ ಎಂದು ನೀನು ಅಲ್ಲಿ ನೆಲದಲ್ಲಿ ಗೀರಿ ನೋಡಿದೆಯಲ್ಲ. ಅದು ವ್ಯರ್ಥ. ಯಾಕೆ ಗೊತ್ತೆ? ಇವತ್ತು ಬೆಳಿಗ್ಗೆ ಅದನ್ನು ಎತ್ತಿಕೊಂಡು ಅಜಿತ್ ಹೊರಗಡೆ ಹೋಗಿದ್ದಾನೆ! ನಮ್ಗೆ ಅಲ್ಲಿ ಪರ್ಸು ಸಿಗುವುದಾದರೂ ಹೇಗೆ?"

"ಓಹ್! ನಿನ್ನ ವಾದ ತಳ್ಳಿಹಾಕುವಂತಿಲ್ಲ. ಆದರೆ ಕಳ್ಳತನದ ಉದ್ದೇಶ?"

"ಆಭರಣ! ಪುಷ್ಪಾ ಗಂಡನಿಗೆ ತಿಳಿಸದೆ, ಕಂತಿನ ಮೇಲೆ ಯಾವುದೋ ಆಭರಣ ಖರೀದಿಸಿದ್ದಾಳೆ.

